**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.377/2022

**PW**. 2

**CW**. 2

**ಸಾಕ್ಷಿಯ ಹೆಸರು -ದಶರಥ**

**ತಂದೆಯ ಹೆಸರು -ಪುಟ್ಟಣ್ಣಯ್ಯ**

**ವಯಸ್ಸು - 43 ವರ್ಷಗಳು**

ದಿನಾಂಕ 19-09-2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ -ವ್ಯವಸಾಯ**

**ವಾಸಸ್ಥಳ -ಹರಿನಹಳ್ಳಿ, ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ಮೃತ ನಾಗೇಗೌಡ ನಮ್ಮ ಊರಿನವರು. ಆರೋಪಿ ಸಹ ನಮ್ಮ ಊರಿನವನು. ಈಗ್ಗೆ 4 ವರ್ಷಗಳ ಹಿಂದೆ ಮೃತ ನಾಗೇಗೌಡ ಮೃತಪಟ್ಟಿದ್ದು, ಹೇಗೆ ಮೃತಪಟ್ಟ ನನಗೆ ಗೊತ್ತಿಲ್ಲ. ಈಗ್ಗೆ 4 ವರ್ಷಗಳ ಹಿಂದೆ ಸುಮಾರು ಸಂಜೆ 6.30 ಗಂಟೆಗೆ ನನ್ನ ಮೋಟರ್ ಸೈಕಲ್ ನಲ್ಲಿ ಮೃತ ನಾಗೇಗೌಡನನ್ನು ಕರೆದುಕೊಂಡು ಹತ್ತಿಗೋಡು ಗ್ರಾಮದ ಕಡೆ ಹೋಗುವಾಗ, ನಮ್ಮ ಹಿಂದೆ ಆರೋಪಿ ಒಂದು ಮೋಟರ್ ಸೈಕಲ್ ನಲ್ಲಿ ಹಿಂಬಾಲಿಸಿಕೊಂಡು ಬರುತ್ತಿದ್ದು, ಚನ್ನಂಗೆರೆ - ಅತ್ತಿಗೋಡು ರಸ್ತೆಯಲ್ಲಿ ಸಂಗರಶೆಟ್ಟಿ ಹಳ್ಳಿ ಗ್ರಾಮ ಸರ್ಕಾರಿ ಶಾಲೆಯ ಮುಂಭಾಗ ನಾಗೇಗೌಡ ನನ್ನ ಮೋಟರ್ ಸೈಕಲ್ ನಿಂದ ಕೆಳಗೆ ಬಿದ್ದು, ಹೊಟ್ಟೆ ಮತ್ತು ಕೈ ಕಾಲುಗಳಿಗೆ ಪೆಟ್ಟಾಗಿ ಗಾಯಗೊಂಡನು. ನಂತರ ಚಾಸಾ-3, 4 ಹಾಗೂ 5 ರವರು ಸೇರಿ ಚಾಸಾ-1 ಮತ್ತು 6 ರವರಿಗೆ ವಿಚಾರ ತಿಳಿಸಿದ್ದು , ಅವರು ನಂತರ ಸ್ಥಳಕ್ಕೆ ಬಂದಿದ್ದು , ನಾವೆಲ್ಲ ಸೇರಿ ನಾಗೇಗೌಡ ಪಿರಿಯಾಪಟ್ಟಣ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ

ಕೆ ಆರ್ ಆಸ್ಪತ್ರೆಗೆ ಸೇರಿಸಿದ್ದು, 10 ದಿನಗಳ ನಂತರ ಚಿಕಿತ್ಸೆ ಫಲಕಾರಿಯಾಗದೇ ನಾಗೇಗೌಡ ಮೃತ ಪಟ್ಟಿರುತ್ತಾನೆ. ನನ್ನ ಮೋಟರ್ ಸೈಕಲ್ ನಿಂದ ನಾಗೇಗೌಡ ಕೆಳಗೆ ಬಿದ್ದಾಗ ಆರೋಪಿ ಹಿಂದಿನಿಂದ ಬಂದು ಹಲ್ಲೆ ಮಾಡಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ನಾಗೇಗೌಡ ಮೃತಪಟ್ಟ ನಂತರ ನಾನು ಪಿರಿಯಾಪಟ್ಟಣ ನ್ಯಾಯಾಲಯಕ್ಕೆ ಹೋಗಿ ಕಲಂ 164 ಅಡಿಯಲ್ಲಿ ಹೇಳಿಕೆ ನೀಡಿದ್ದೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ದಿಃ 25-06-2022 ರಂದು ಸಂಜೆ 6.30 ಗಂಟೆಗೆ ಅತ್ತಿಗೋಡು ರಸ್ತೆಯಲ್ಲಿ ಸಂಗರಶೆಟ್ಟಿ ಹಳ್ಳಿ ಗ್ರಾಮ ಸರ್ಕಾರಿ ಶಾಲೆಯ ಮುಂಭಾಗ ನಾಗೇಗೌಡ ಮತ್ತು ನಾನು ಹೋಗುವಾಗ ಆರೋಪಿ ತನ್ನ ಮೊಟರ್ ಸೈಕಲ್ ನಲ್ಲಿ ಹಿಂಬಾಲಿಸಿಕೊಂಡು ಬಂದು ನಮ್ಮ ಮೋಟರ್ ಸೈಕಲ್ ಅನ್ನು ಅಡ್ಡ ಹಾಕಿದ್ದು , ನಾನು ಮೋಟರ್ ಸೈಕಲ್ ಅನ್ನು ನಿಲ್ಲಿಸಿದಾಗ ಆರೋಪಿ ನಾಗೇಗೌಡನನ್ನು ಮೋಟರ್ ಸೈಕಲ್ ನಿಂದ ಎಳೆದುಕೊಂಡು ಸ್ಥಳದಲ್ಲಿದ್ದ ನ್ಯಾಯಾಲಯದ ಮುಂದಿರುವ ಕಲ್ಲನ್ನು ತೆಗೆದುಕೊಂಡು ಆರೋಪಿಯು ನಾಗೇಗೌಡನ ತಲೆಗೆ ಹೊಡೆದು ಗಾಯಪಡಿಸಿದ ಎಂದರೆ ಸರಿಯಲ್ಲ. ಕೂಡಲೇ ನಾನು ಗಾಬರಿಯಾಗಿ ವಿಚಾರ ತಿಳಿಸಲು ಊರಿಗೆ ಬಂದೆನು ಎಂದರೆ ಸರಿಯಲ್ಲ. ನಾಗೇಗೌಡನನ್ನು ಅದೇ ದಿನ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ವಿಚಾರಿಸಲಾಗಿ,

ಆರೋಪಿ ಹೆಂಡತಿ ಅವನೊಂದಿಗೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗಿದ್ದು , ಸುಮಾರು 4 ತಿಂಗಳುಗಳಿಂದ ನಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದು , ನನ್ನ ಮಗಳು ಗಂಡನ ಮನೆ ಬಿಟ್ಟು ನನ್ನ ಮನೆಯಲ್ಲಿರುವುದರಿಂದ , ನೀನು ಊಟಕ್ಕೆ ನಮ್ಮ ಮನೆಗೆ ಬಂದರೆ ಊರಿನ ಜನರು ಇಲ್ಲಸಲ್ಲದ ಮಾತನಾಡಿ ತಪ್ಪು ತಿಳಿದುಕೊಳ್ಳುತ್ತಾರೆ ಎಂದು ಊಟ ಕೊಡದೆ ನಿಲ್ಲಿಸಿದ್ದೆ, ಆ ವಿಚಾರದಲ್ಲಿ ನನ್ನ ಮೇಲೆ ದ್ವೇಷ ಇಟ್ಟುಕೊಂಡು ಗಲಾಟೆ ಮಾಡಿದ್ದಾನೆ ಎಂದು ನಾಗೇಗೌಡ ನಮ್ಮ ಮುಂದೆ ಹೇಳಿದ ಎಂದರೆ ಸರಿಯಲ್ಲ.ಆ ಬಗ್ಗೆ ಈಗ ನನಗೆ ಓದಿ ಹೇಳಿದಂತೆ ನಿಪಿ–5 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಆ ಬಗ್ಗೆ ದಿಃ 27–09–2022 ರಂದು ಪಿರಿಯಾಪಟ್ಟಣ ನ್ಯಾಯಾಲಯದ ಮುಂದೆ ನಿಪಿ–4 ರಂತೆ ನಾನು ಹೇಳಿಕೆ ನೀಡಿ , ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–4 ಮತ್ತು 5 ರಂತೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.